ಈ ಸಾವೀನ ನೋಡ್ರಪ್ಪ, ಹೇಗೆ ನಳನಳಿಸ್ತಾಳೆ? ಅವಳಿಗ್ಯಾವ ಚಿಂತೆ... ನಾಕ್ ಮನೆ ಊಟ; ನಾಕ್ ದಿಕ್ಕಿನ ಓಡಾಟ! ನಮ್ಹಾಂಗಾ?' ವಿನಾಕಾರಣ ಕೊಂಕುಮಾತು ಅಪವಾದಕ್ಕೊಳಗಾಗುತ್ತಿದ್ದಳು. ಉಪಾಧ್ಯರು ತಮಾಷೆಯಾಗಿ, 'ನಿಮ್ ಜೊತೆಗೆ ಟೀವಿಯೆದುರು ಕೂಡಿಸಿಕೊಂಡು ಕರದ ತಿಂಡಿ, ಬೆಣ್ಣೆತುಪ್ಪ ತಿನಿಸಿನೋಡಿ. ಎರಡುತಿಂಗಳಲ್ಲಿ ನಿಮ್ಮಹಾಗೆ ಆಗದಿದ್ರೆ!...' ಅಂದಿದ್ದಕ್ಕೆ ಅವರ ಮಡದಿಯ ಮುಷ್ಕರದ ಜೊತೆ ಊರವರೆಲ್ಲರ ಟೀಕೆಟಿಪ್ಪಣೆಗಳಿಗೆ ಗುರಿಯಾದರು. 'ಶ್ರಾದ್ಧ ಸತ್ಯನಾರಾಯಣಕಥೆ ಹೋಗಲಿ, ಉಪ್ಪಿನಕಾಯಿ ಮಿಡಿಗೂ ಅವಳಿಲ್ಲದಿದ್ರೆ ನಿಮಗೆ ನಡೆಯೋದಿಲ್ಲ. ಅವಳನ್ನು ಕಂಡರೆ ಹರಿಹಾಯೋದೂ ನೀವೆ...' ಅಂತ ಮುಕುಂದರಾಯರು ಹೇಳಹೊರಟದ್ದನ್ನು ಕೈಯ ಅಭಿನಯದಲ್ಲೆ ತಡೆದ ಅವರ ಹೆಂಡತಿ, 'ಅವಳ ವಕಾಲತ್ತು ಸಾಕು, ಗಂಡಸರ ಕೆಲಸ ನೋಡಿ...' ಅಂತ ಅಖೈರು ಮಾತು ಹೇಳಿಬಿಟ್ಟಿದ್ದಳು. ಕೊನೆಗೆ ಶಾಲಾಭಿವೃದ್ಧಿ ಸಮಿತಿಯವರು ಬಂಡೆಹಳ್ಳಿ ಕ್ರಾಸಿನಲ್ಲಿರುವ ಶಾಲೆಯಲ್ಲಿ ಕಸಗುಡಿಸುವ, ನೀರುತುಂಬುವ ಮುಂತಾದ ಕೆಲಸಕ್ಕೆ ನೇಮಿಸಿ ಶಾಲೆಗೆ ತಾಗಿರುವ ಬಿಸಿಯೂಟದ ಮನೆ ಹತ್ತಿರ ಇರಲು ಅನುಮತಿ ಕೊಟ್ಟರು. ಮಧ್ಯಾಹ್ನದೂಟವೇನೊ ಹಾಗೂಹೀಗೂ ಆಗುತ್ತಿತ್ತು. ಸಮಿತಿಯವರು ಕೊಡುವ ಅಲ್ಪಹಣ ಈಗಿನ ಕಾಲಕ್ಕೆ ಯಾವ ಮೂಲೆಗೆ? ಅಕ್ರಾಂ ಸಹಾಯ ಕೇಳಿರಬೇಕು; ಬಂದಿದಾಳೆ. ತಪ್ಪೇನಿದೆ ಪಾಪ! ಅನಿಸಿತು ರಾಯರಿಗೆ.

ಬಂಡೆಹಳ್ಳಿ ತಿರುವಿನಲ್ಲಿ ಹಾಯುವ ರಸ್ತೆಯ ಮೇಲ್ಭಾಗವೆಲ್ಲ ಅರಣ್ಯ ಇಲಾಖೆಗೆ ಸೇರಿದ್ದು. ಈ ಕಡೆ ಮಾತ್ರ ಹಳ್ಳಿಗಳವರಿಗೆ ಸೇರಿದ ಮಾಲ್ಕಿ ಸೊಪ್ಪಿನಬೆಟ್ಟಗಳು. ಆ ತಿರುವಿನಲ್ಲಿ ಕವಲೊಡೆದು ಹೋಗುವ ಮತ್ತೆರಡು ದಾರಿಗಳಲ್ಲಿ ಸುಂಕದಮನೆ ಮತ್ತು ಆನೆಗದ್ದೆಗಳಿಗೆ ದಿನಕ್ಕೆರಡು ಸರಕಾರಿ ಬಸ್ಸುಗಳು ಹೋಗುತ್ತವೆ. ಇದಲ್ಲದೆ ಆ ತಿರುವಿನಲ್ಲೆ ಹುಟ್ಟಿ ಮೂರುದಿಕ್ಕುಗಳಿಗೆ ಸಾಗುವ ಕಾಲುದಾರಿಗಳು ಅರ್ಧಕಿಲೋಮೀಟರು ಮುಕ್ಕಾಲುಕಿಲೋಮೀಟರು ಅಂತರದಲ್ಲಿ ಮೂರ್ನಾಲ್ಕು ಹಳ್ಳಿಗಳನ್ನು ತಲುಪುತ್ತವೆ. ಹೀಗಾಗಿ ಎಲ್ಲಾ ಬಸ್ಸುಗಳಿಂದಲೂ ಮುಕ್ಕಾಲುಪಾಲು ಜನ ಈ ಸ್ಟಾಪಿನಲ್ಲಿ ಇಳಿಯುತ್ತಾರೆ. ಜನವಸತಿಯಿಲ್ಲದಿದ್ದರೂ ಮಧ್ಯವರ್ತಿ ಜಾಗವಾಗಿದ್ದಕ್ಕೆ ಸರಕಾರಿ ಶಾಲೆಯನ್ನು ಇಲ್ಲಿ ತೆರೆದಿದ್ದರು.

ತಿರುವಿನಲ್ಲಿ ದಾರಿಯ ಪಕ್ಕದಲ್ಲಿ ಮಾಲ್ಕಿಯವರಿಗೆ ಸೇರಿರದ ಸರಕಾರಿ ಜಾಗದಲ್ಲಿ ಸೋಗೆಯ ಗುಡಿಸಲು ಕಟ್ಟಿದ್ದ. ಮುಂದುವರಿಸಿದ ಮಾಡಿನ ಕೆಳಗೆ ಅಡಕೆ ದಬ್ಬೆಯ ಅಟ್ಟಳಿಗೆಯಂತದನ್ನು ನಿರ್ಮಿಸಿದ್ದ. ಗುಡಿಸಲಿಂದ ರಸ್ತೆಯಾಚೆ ಇನ್ನೂರು ಮೀಟರು ದೂರವಿರುವ ಶಾಲೆ ಕಾಣಿಸುತ್ತಿತ್ತು. ಅಟ್ಟಳಿಗೆಯಮೇಲೆ ಗಾಜಿನ ಬಾಟ್ಲಿಗಳಲ್ಲಿ ಪೆಪ್ಪರಮಿಂಟು, ಚಾಕಲೇಟು, ಬಣ್ಣಬಣ್ಣದ ಬಿಸ್ಕಿಟ್ಟುಗಳು, ಬೀಡಿ, ಗುಟ್ಕಾ ಪ್ಯಾಕೆಟ್ಟುಗಳನ್ನಿಟ್ಟುಕೊಂಡು ಅಂಗಡಿ ಸುರುಮಾಡಿದ. ಬಸ್ಸು ಹತ್ತಲು ಕಾಯುವವರು ಬಸ್ಸಿಂದಿಳಿಯುವವರು ಅಂಗಡಿಗೆ ಬರತೊಡಗಿದರು. ಊಟದ ಬಿಡುವಿನಲ್ಲಿ ಶಾಲೆಮಕ್ಕಳು ಪೆಪ್ಪರಮಿಂಟು, ಚಾಕಲೇಟು ಕೊಳ್ಳಲು ಬರುತ್ತಿದ್ದರು. ಒಂದು ತಿಂಗಳಾಗುವಾಗ ಅಂದಾಜು ಸಿಕ್ಕ ಅಕ್ರಾಂ ಚಹಾ, ಬ್ರೆಡ್ಡು ಸುರುಮಾಡಿದ. ಗಿರಾಕಿ ಹೆಚ್ಚುತ್ತಿದ್ದಂತೆ ಬಸ್ಸಿನ ಸಮಯಕ್ಕೆ ಮಿರ್ಚಿಭಜಿ ಕರಿಯತೊಡಗಿದ. ಒಂದು ಮಂಗಳವಾರ ಮುಕುಂದರಾಯರು ಬಂಡೆಹಳ್ಳಿ ಕ್ರಾಸಿನಲ್ಲೆ ಇಳಿದರು. ಅಂಗಡಿಯಲ್ಲಿ ಬಸ್ಸಿಂದಿಳಿದ ಸುಮಾರಷ್ಟು ಜನರಿದ್ದರು. ಡ್ರೈವರು ಕಂಡಕ್ಟರು ಇದ್ದರು. ಇವರನ್ನು ಕಂಡ ಅಕ್ರಾಂ ಆತುರದಿಂದ ನಮಸ್ಕರಿಸಿ ಸ್ವಾಗತಿಸಿದ. ಬೇಡವೆಂದರೂ ಆಪ್ತವಾಗಿ ಒತ್ತಾಯಿಸಿ ಪೇಪರ್‌ಪ್ಲೇಟಿನಲ್ಲಿ ಮಿರ್ಚಿಭಜಿ ಹಾಕಿಕೊಟ್ಟ. ಅವರಿಗೆ ಅಚ್ಚರಿಯಾದದ್ದೆಂದರೆ ಒಳಗೆ ಒಲೆಯೆದುರು ಹಿಟ್ಟಿನಲ್ಲಿ ಮೆಣಸಿನಕಾಯಿ ಮುಳುಗಿಸಿ ಎಣ್ಣೆಯಲ್ಲಿ ಬಿಡುತ್ತ ಕುಳಿತಿದ್ದ ಸಾವಕ್ಕ! ತನ್ನೊಬ್ಬನಿಂದ ಆಗದಿದ್ದುದಕ್ಕೆ ಬಿಡುವಿನಲ್ಲಿ ಸಾವಕ್ಕ ಸಹಾಯ ಮಾಡತಾಳೆ ಅಂದ ಅಕ್ರಾಂ. ಭಜಿ ತಿಂದು ಹೊರಟವರನ್ನು ಬೀಳ್ಕೊಡುತ್ತ ಅವರ ಉದಾರತೆಯಿಂದಲೆ ಇವತ್ತು ತಾನು ದಿನಾ